ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

3ನೇ ವರ್ಷ 31ನೇ ಸಂಚಿಕೆ ಕೊಪ್ಪ 14-4-1985 ಭಾನುವಾರ ಬೆಲೆ 20 ಪೈಸೆ

ಪಿ. ಹೆಚ್. ಇ. ಎಂಬ ಅಗೋಚರ ಇಲಾಖೆ!

ವಿದ್ಯುತ್, ಫೋನು, ನಲ್ಲಿ, ರಸ್ತೆ, ಸೇತುವೆ ಹೀಗೆ ಯಾವುದು ಹಾಳಾದರೂ, ಯಾವುದರ ಬಗ್ಗೆ ಹೇಳಬೇಕಾದರೂ ಅದಕ್ಕೊಂದು ಕಛೇರಿಯಿರುತ್ತದೆ. ಆದರೆ ಒಳ್ಳೆ ಬೇಸಿಗೆಯಲ್ಲಿ ಕೊಳವೆ ಬಾವಿಗಳು ಕೆಟ್ಟು ನಿಂತಿರುವಾಗ ಯಾರಬಳಿ ಹೇಳಬೇಕೆಂಬುದೆ ಜನರಿಗೆ ಗೊತ್ತಾಗುತ್ತಿಲ್ಲ. ಅದಕ್ಕೊಂದು ಪಿ. ಹೆಚ್. ಇ. ಇಲಾಖೆ ಎಂಬುದಿದೆಯಂತೆ. ಆದರೆ ಇದರ ಸಿಬ್ಬಂದಿ ಎಲ್ಲಿರುತ್ತಾರೋ ಎಲ್ಲಿ ಹೋಗುತ್ತಾರೋ ಯಾರಿಗೂ ಗೊತ್ತಿಲ್ಲ.

ಕೆಲವೊಮ್ಮೆ ಹಳ್ಳಿಗರು ಸ್ಥಳೀಯ ರಾಜಕೀಯ ಮುಂದಾಳುಗಳ ಬಳಿ ಹೇಳುವುದುಂಟು-"ಎಲ್ಲೆಲ್ಲೋ ಓಡಾಡ್ತೀರಿ, ಯಾವ್ಯಾವುದೋ ಕೆಲಸ ಮಾಡಿಸ್ತೀರಿ. ಈ ಒಂದು ಕೊಳವೆ ಬಾವಿ ರಿಪೇರಿ ಮಾಡಿಸಲು ಆಗುವುದಿಲ್ಲವೇನ್ರಯ್ಯ?" ಅಂತ.

ಈ ಕೊಳವೆ ಬಾವಿಗಳು ಬಹು ಬೇಗ ಮತ್ತೆ ಪದೇ ಪದೇ ಕೆಟ್ಟು ನಿಲ್ಲುವುದನ್ನು ತಪ್ಪಿಸುವಂಥ ಗುಣಮಟ್ಟವನ್ನು ಬೆಳೆಸುವುದಲ್ಲದೆ, ಅವು ಕೆಟ್ಟಾಗ ಶೀಘ್ರ ರಿಪೇರಿಗೂ ವ್ಯವಸ್ಥೆಯಾಗಬೇಕು.

ಪಿ. ಹೆಚ್. ಇ. ಎಂಬ ಅಗೋಚರ ಇಲಾಖೆ ಈ ವಿಚಾರದಲ್ಲಿ ಏನಾದರೂ ಸುಧಾರಣೆ ಮಾಡಿಕೊಂಡೀತೆ?

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
2.4.85	305	202
3.4.85	317	194
4.4.85	310	185
5.4.85	318	202

ಈ ವಾರ ಮಾರುಕಟ್ಟೆ ಸ್ಥಿರವಾಗಿತ್ತು. ಏಲಕ್ಕಿಯ ಬೇಡಿಕೆ ಮಾಮೂಲಿಯಾಗಿತ್ತು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 9-4-1985

ಸರಕು: 2460 – 3009

ಬೆಟ್ಟೆ: 2150 – 2470

ಗೊರಬಲು: 1260 – 1920

ಸೋಮ್ಲಾಪುರ ಸಹಕಾರಿ ಹಾಲು ಉತ್ಪಾದಕರ ಸಂಘ

ಕೊಪ್ಪ: ಇಲ್ಲಿನ ನಿತ್ಯಾಧಾರ ಚರ್ಚಿನ ಗುರುಗಳು, ಸದ್ಯಕ್ಕೆ ಚೀಫ್ ಪ್ರೊಮೋಟರ್ ಆಗಿರುವ 'ಸೋಮ್ಲಾಪುರ ಸಹಕಾರಿ ಹಾಲು ಉತ್ಪಾದಕರ ಸಂಘ'ದ ಸದಸ್ಯರ ಸಂಘಟನೆ ಭರದಿಂದ ನಡೆಯುತ್ತಿದೆ. ಗರಿಷ್ಠ ಬೆಲೆಯಲ್ಲಿ ಉತ್ಪಾದಕರಿಂದ ಹಾಲು ಕೊಂಡು ಬಾಳೆಹೊನ್ನೂರಿನ ಚಿಲ್ಲಿಂಗ್ ಪ್ಲಾಂಟ್ ಮೂಲಕ ಹಾಸನದ ಡೈರಿಗೆ ಕಳಿಸಲಾಗುತ್ತಿದೆ. ಅಲ್ಲದೆ ಸರ್ಕಾರಿ ಡೈರಿ ಹಾಲನ್ನು ತರಿಸಿ ಸಂಘದ ಮೂಲಕ ಕೊಪ್ಪದಲ್ಲಿ ವಿತರಿಸಲಾಗುತ್ತಿದೆ. ಮುಂಚಿತವಾಗಿ ತಿಳಿಸಿದರೆ ಸಮಾರಂಭಗಳಿಗೆ ಅಗತ್ಯವಿದ್ದಷ್ಟು ಹಾಲನ್ನು ಸರಬರಾಜು ಮಾಡಲಾಗುತ್ತದೆ.

ವರಗನ ಹಳ್ಳಕ್ಕೆ ಸೇತುವೆ

ಉತ್ತಮೇಶ್ವರ: ಇಲ್ಲಿನ ಉತ್ತಮೇಶ್ವರ ದೇವಸ್ಥಾನದ ಸಮೀಪ ವರಗನ ಹಳ್ಳಕ್ಕೆ ಅಡ್ಡಲಾಗಿ 3 ಲಕ್ಷ ರೂ. ವೆಚ್ಚದಲ್ಲಿ 12'–22' ಸೇತುವೆ ಮಂಜೂರಾಗಿದ್ದು, ಈಚೆಗೆ ಟೆಂಡರ್ ಕರೆದು ನಾರ್ವೆಯ ಕಾಡಪ್ಪಗೌಡರಿಗೆ ಟೆಂಡರ್ ಆಗಿರುವುದಾಗಿ ತಿಳಿದುಬಂದಿದೆ

ನಾಮಕಾವಾಸ್ತೆ ಸಮ್ಮೇಳನಗಳನ್ನು ಬಹಿಷ್ಕರಿಸುವ ವಿಶಿಷ್ಟ ನಿರ್ಣಯ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: "ಇಂಥ ಸಮ್ಮೇಳನಗಳಲ್ಲಿ ಚರ್ಚಿಸಿ ನಿರ್ಣಯಿಸಿದ ವಿಷಯಗಳ ಬಗ್ಗೆ ಸರ್ಕಾರ ಏನಾದರೂ ಆಸಕ್ತಿ ತೋರದಿದ್ದಲ್ಲಿ ಮುಂದೆ ಇಂಥ ಸಮ್ಮೇಳನಗಳನ್ನೆಲ್ಲ ಬಹಿಷ್ಕರಿಸುವ" ಕುತೂಹಲಕರ ನಿರ್ಣಯವೊಂದನ್ನು ಇಲ್ಲಿ ಈಚೆಗೆ ನಡೆದ ಜನಸಂಖ್ಯಾ ಸಮ್ಮೇಳನ ಅಂಗೀಕರಿಸಿತು.

ಕ್ಷೇತ್ರಾಭಿವೃದ್ಧಿ ಅಧಿಕಾರಿ ವೆಂಕಟೇಶಪ್ರಸಾದ್ ಅಧ್ಯಕ್ಷತೆಯಲ್ಲಿ ಪುರಸಭಾಧ್ಯಕ್ಷ ಕೆ.ಆರ್. ಅಣ್ಣಯ್ಯ ಹೆಗ್ಡೆ ಸಮ್ಮೇಳನವನ್ನು ಉದ್ಘಾಟಿಸಿದರು. ಜೆ.ಸಿ.ಬಿ.ಎಂ. ಕಾಲೇಜು ವೈಸ್ ಪ್ರಿನ್ಸಿಪಾಲ್ ಎ. ಕೆ. ಭಟ್ ಮುಖ್ಯ ಭಾಷಣಕಾರರಾಗಿದ್ದರು.

ಸಮ್ಮೇಳನದಲ್ಲಿ ಅಷ್ಟೇನೂ ಪ್ರತಿನಿಧಿಗಳು ಭಾಗವಹಿಸಿರದಿದ್ದರೂ ಸಮ್ಮೇಳನ ವಿಚಾರಪೂರಿತವಾಗಿತ್ತು. ಕಡೆಯಲ್ಲಿ ಸಮ್ಮೇಳನಾರ್ಥಿಗಳಲ್ಲಿ ನಡೆದ ಚರ್ಚೆಯಲ್ಲಿ ಜನಸಂಖ್ಯೆ ಕುರಿತ ಸಮಸ್ಯೆಗಳಿಗೆ ಆರ್ಥಿಕ ಸಮಾನತೆಯೆ ಮೂಲಪರಿಹಾರವೆಂಬ ಅಭಿಪ್ರಾಯ ವ್ಯಕ್ತವಾಯಿತು.

ಇಂಥ ಸಮ್ಮೇಳನಗಳು ಕೇವಲ ಅಲಂಕಾರದ ಪದ್ಧತಿಗಳಾಗಬಾರದು ಎಂದೂ ನಿರ್ಣಯ ಎಚ್ಚರಿಸಿತು.

ಕೊಪ್ಪ ತಾ|| ಪ್ರಾಥಮಿಕ ಶಿಕ್ಷಕರ ಸಮ್ಮೇಳನ

ಕೊಪ್ಪ: ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಶಾಲಾಭಿವೃದ್ಧಿ ಸಮಿತಿಗಳ ತಾ|| ಮಟ್ಟದ ಸಮ್ಮೇಳನ ಇಲ್ಲಿ ಏ. 10ರಂದು ಪಿ. ಜಿ. ಗುರ್ಜರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಮಂತ್ರಿ ಗೋವಿಂದ ಗೌಡರು, ಶಿಕ್ಷಕರು ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯಿಂದಿರಲು ಕರೆನೀಡಿದರು. ಮುಖ್ಯ ಅತಿಥಿಗಳಾಗಿದ್ದ ಇಲ್ಲಿನ ಪ್ರ. ದ. ಕಾಲೇಜಿನ ಹಿರಿಯ ಉಪನ್ಯಾಸಕರಾದ ಮಲ್ಲಿಕಾರ್ಜುನಯ್ಯ ಅವರು, ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಮಸ್ಯೆಗಳನ್ನು ವಿವರಿಸಿ, ಈ ಬಗ್ಗೆ ಗಮನ ಕೊಡದ ಬಗ್ಗೆ ಸರ್ಕಾರವನ್ನು ಖಂಡಿಸಿದರು.

ಜಿಲ್ಲಾ ಶಿಕ್ಷಣಾಧಿಕಾರಿ ಪೆಮ್ಮಯ್ಯ ಅವರು ಸಮಾರೋಪ ಭಾಷಣ ಮಾಡಿದರು. ಶಂಕರ್ ಕಂಪನಿಯ ಎ. ಮನೋಹರ ರಾವ್ ಅವರು 5 ಮಂದಿ ಅತ್ಯುತ್ತಮ ಶಿಕ್ಷಕರು ಮತ್ತು ಅತ್ಯುತ್ತಮ ಶಾಲಾಭಿವೃದ್ಧಿ ಸಮಿತಿಗೆ ಬಹುಮಾನ ವಿತರಣೆ ಮಾಡಿದರು.

ತಾ|| ಶಿಕ್ಷಣಾಧಿಕಾರಿ ಹೆಚ್. ಎಂ. ಮಲ್ಲಯ್ಯ ಸ್ವಾಗತಿಸುತ್ತ ಈ ಸಮ್ಮೇಳನ 61 ವರ್ಷದಿಂದ ನಡೆಯುತ್ತಿದೆ ಎಂದರು.

ಟಿ. ಆರ್. ಆಚಾರ್ಯರ ಸಾಧನೆ: ಸತತ ಎರಡನೇ ಬಾರಿಗೆ ಕೋಟಿ ರೂ. ವಿಮೆ

ಕೊಪ್ಪ: ಇಲ್ಲಿನ ಜೀವ ವಿಮಾ ಅಭಿವೃದ್ಧಿ ಅಧಿಕಾರಿ ಟಿ.ಆರ್. ಆಚಾರ್ಯ ಅವರು ಸತತ ಎರಡನೇ ಬಾರಿಗೆ 1 ಕೋಟಿ ರೂ. ವ್ಯವಹಾರ ಮಾಡಿದ್ದಾರೆ. ಈ ವರ್ಷ ಅವರು ಮಾಡಿರುವ ವ್ಯವಹಾರ 1 ಕೋಟಿ 6 ಲಕ್ಷ ರೂ. ಗಳಾಗಿದೆ.

ಕಳೆದ ವರ್ಷ ಆಚಾರ್ಯ ಅವರು ಚಿಕ್ಕಮಗಳೂರು ಶಾಖೆಗೇ ಮೊಟ್ಟಮೊದಲಿಗರಾಗಿ 1 ಕೋಟಿ ರೂ. ವ್ಯವಹಾರ ಸಾಧಿಸಿ, ಪ್ರಶಸ್ತಿ ಪಡೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ವರ್ಷ ಕೂಡ ಚಿಕ್ಕಮಗಳೂರು ಶಾಖೆಯಲ್ಲಿ ಈ ಸಾಧನೆ ಮಾಡಿದವರು ಇವರೊಬ್ಬರೇ ಆಗಿದ್ದು ಶಾಖೆಯಲ್ಲಿ ತಮ್ಮ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

ಅನಾರೋಗ್ಯದ ಕಾರಣ 7-4-85ರ ನಮ್ಮ ಪತ್ರಿಕೆ ಪ್ರಕಟಿಸಲಾಗಲಿಲ್ಲ.

—ಸಂ.

ಶೃಂಗೇರಿ ದಫೇದಾರ್ ಸುಬ್ಬರಾವ್ ಸಸ್ಪೆಂಡ್

ಶೃಂಗೇರಿ: ಇಲ್ಲಿನ ಪೋಲೀಸ್ ಠಾಣೆಯ ದಫೇದಾರ್ ಸುಬ್ಬರಾವ್ ಕಡೆಗೂ ಸಸ್ಪೆಂಡ್ ಆಗಿದ್ದಾರೆ. ಕೆಲಸದ ಅವಧಿಯಲ್ಲಿ ಪಾನಮತ್ತರಾಗಿರುವುದೂ ಸೇರಿದಂತೆ ಹಲವು ಆಪಾದನೆಗಳಿಗಾಗಿ ಇವರನ್ನು ಎಸ್.ಪಿ. ಸಸ್ಪೆಂಡ್ ಮಾಡಿರುವುದಾಗಿ ವರದಿಯಾಗಿದೆ.

ಸದಾ ಕಂಠಮುಟ್ಟ ಕುಡಿದು ಕೊಂಡು, ಠಾಣೆಗೆ ದೂರು ನೀಡಲು ಬಂದವರನ್ನು ಅಥವಾ ಕ್ಷುಲ್ಲಕ ದೂರುಗಳ ಮೇಲೆ ತಾನು 'ತನಿಖೆ'ಗೆ ಹೋದಾಗ ಸಂಬಂಧಪಟ್ಟವರನ್ನು ಪೀಡಿಸಿ, ದಂಡಿಸಿ, ದುಡ್ಡು ಕೀಳುವುದೇ ಈತನ ಪೋಲೀಸ್ ವೃತ್ತಿಯಾಗಿತ್ತೆನ್ನಲಾಗಿದೆ.

ಹರಿಹರಪುರ, ಜಯಪುರ, ಬಾಳೆಹೊನ್ನೂರುಗಳಲ್ಲೂ ಇಂಥ ಒಂದೆರಡು 'ಕೇಸ್'ಗಳಿರುವುದು ಎಸ್. ಪಿ. ಯವರ ಗಮನಕ್ಕೆ ಬಂದಿವೆಯೋ ಎಂಬುದನ್ನೂ ಕಾದುನೋಡಬೇಕಾಗಿದೆ.

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ - 19

3ನೇ ವರ್ಷ 31ನೇ ಸಂಚಿಕೆ ಕೊಪ್ಪ 14-4-1985 ಭಾನುವಾರ ಬೆಲೆ 20 ಪೈಸೆ

ಪಿ. ಹೆಚ್. ಇ. ಎಂಬ ಅಗೋಚರ ಇಲಾಖೆ!

ವಿದ್ಯುತ್, ಫೋನು, ಪತ್ರಿ, ರಸ್ತೆ, ಸೇತುವೆ ಹೀಗೆ ಯಾವುದು ಹಾಳಾದರೂ, ಯಾವುದರ ಬಗ್ಗೆ ಹೇಳಬೇಕಾದರೂ ಅದಕ್ಕೊಂದು ಕಛೇರಿಯಿರುತ್ತದೆ. ಆದರೆ ಒಳ್ಳೆ ಬೇಸಿಗೆಯಲ್ಲಿ ಕೊಳವೆ ಬಾವಿಗಳು ಕೆಟ್ಟು ನಿಂತಿರುವಾಗ ಯಾರಬಳಿ ಹೇಳಬೇಕೆಂಬುದೆ ಜನರಿಗೆ ಗೊತ್ತಾಗುತ್ತಿಲ್ಲ. ಅದಕ್ಕೊಂದು ಪಿ. ಹೆಚ್. ಇ. ಇಲಾಖೆ ಎಂಬುದಿದೆಯಂತೆ. ಆದರೆ ಇದರ ಸಿಬ್ಬಂದಿ ಎಲ್ಲಿರುತ್ತಾರೋ ಎಲ್ಲಿ ಹೋಗುತ್ತಾರೋ. ಜನಕ್ಕೆ ಗೊತ್ತಿಲ್ಲ.

ಕೆಲವೊಮ್ಮೆ ಹಳ್ಳಿಗರು ಸ್ಥಳೀಯ ರಾಜಕೀಯ ಮುಂದಾಳುಗಳ ಹತ್ತಿರ ಕೇಳುವುದುಂಟು-"ಎಲ್ಲೆಲ್ಲೋ ಓಡಾಡ್ತೀರಿ, ಯಾವ್ಯಾವುದೋ ಕೆಲಸ ಮಾಡಿಸ್ತೀರಿ. ಈ ಒಂದು ಕೊಳವೆ ಬಾವಿ ರಿಪೇರಿ ಮಾಡಿಸಲು ಆಗುವುದಿಲ್ಲವೇನ್ರಪ್ಪ?" ಅಂತ.

ಈ ಕೊಳವೆ ಬಾವಿಗಳು ಬಹು ಬೇಗ ಮತ್ತೆ ಪದೇ ಪದೇ ಕೆಟ್ಟು ನಿಲ್ಲುವುದನ್ನು ತಪ್ಪಿಸುವಂಥ ಗುಣಮಟ್ಟವನ್ನು ಬೆಳೆಸುವುದಲ್ಲದೆ, ಅವು ಕೆಟ್ಟಾಗ ಶೀಘ್ರ ರಿಪೇರಿಗೂ ವ್ಯವಸ್ಥೆಯಾಗಬೇಕು.

ಪಿ. ಹೆಚ್. ಇ. ಎಂಬ ಅಗೋಚರ ಇಲಾಖೆ ಈ ವಿಚಾರದಲ್ಲಿ ಏನಾದರೂ ಸುಧಾರಣೆ ಮಾಡಿಕೊಂಡೀತೆ?

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
2.4.85	305	202
3.4.85	317	194
4.4.85	310	185
5.4.85	318	202

ಈ ವಾರ ಮಾರುಕಟ್ಟೆ ಸ್ಥಿರವಾಗಿತ್ತು. ಏಲಕ್ಕಿಯ ಬೇಡಿಕೆ ಮಾಮೂಲಿಯಾಗಿತ್ತು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 9-4-1985

ಸರಕು: 2460 – 3009

ಬೆಟ್ಟೆ: 2150 – 2470

ಗೊರಬಲು: 1260 – 1920

ಸೋಮ್ಲಾಪುರ ಸಹಕಾರಿ ಹಾಲು ಉತ್ಪಾದಕರ ಸಂಘ

ಕೊಪ್ಪ: ಇಲ್ಲಿನ ನಿತ್ಯಾಧಾರ ಚರ್ಚಿನ ಗುರುಗಳು, ಸದ್ಯಕ್ಕೆ ಚೀಫ್ ಪ್ರೊಮೋಟರ್ ಆಗಿರುವ 'ಸೋಮ್ಲಾಪುರ ಸಹಕಾರಿ ಹಾಲು ಉತ್ಪಾದಕರ ಸಂಘ'ದ ಸದಸ್ಯರ ಸಂಘಟನೆ ಭರದಿಂದ ನಡೆಯುತ್ತಿದೆ. ಗರಿಷ್ಠ ಬೆಲೆಯಲ್ಲಿ ಉತ್ಪಾದಕರಿಂದ ಹಾಲು ಕೊಂಡು ಬಾಳೆಹೊನ್ನೂರಿನ ಚಿಲ್ಲಿಂಗ್ ಪ್ಲಾಂಟ್ ಮೂಲಕ ಹಾಸನದ ಡೈರಿಗೆ ಕಳಿಸಲಾಗುತ್ತಿದೆ. ಅಲ್ಲದೆ ಸರ್ಕಾರಿ ಡೈರಿ ಹಾಲನ್ನು ತರಿಸಿ ಸಂಘದ ಮೂಲಕ ಕೊಪ್ಪದಲ್ಲಿ ವಿತರಿಸಲಾಗುತ್ತಿದೆ. ಮುಂಚಿತವಾಗಿ ತಿಳಿಸಿದರೆ ಸಮಾರಂಭಗಳಿಗೆ ಅಗತ್ಯವಿದ್ದಷ್ಟು ಹಾಲನ್ನು ಸರಬರಾಜು ಮಾಡಲಾಗುತ್ತದೆ.

ವರಗನ ಹಳ್ಳಕ್ಕೆ ಸೇತುವೆ

ಉತ್ತಮೇಶ್ವರ: ಇಲ್ಲಿನ ಉತ್ತಮೇಶ್ವರ ದೇವಸ್ಥಾನದ ಸಮೀಪ ವರಗನ ಹಳ್ಳಕ್ಕೆ ಅಡ್ಡಲಾಗಿ 3 ಲಕ್ಷ ರೂ. ವೆಚ್ಚದಲ್ಲಿ 12'–22' ಸೇತುವೆ ಮಂಜೂರಾಗಿದ್ದು, ಈಚೆಗೆ ಟೆಂಡರ್ ಕರೆದು ನಾರ್ವೆಯ ಕಾಡಪ್ಪಗೌಡರಿಗೆ ಟೆಂಡರ್ ಆಗಿರುವುದಾಗಿ ತಿಳಿದುಬಂದಿದೆ

ನಾಮಕಾವಾಸ್ತೆ ಸಮ್ಮೇಳನಗಳನ್ನು ಬಹಿಷ್ಕರಿಸುವ ವಿಶಿಷ್ಟ ನಿರ್ಣಯ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: "ಇಂಥ ಸಮ್ಮೇಳನಗಳಲ್ಲಿ ಚರ್ಚಿಸಿ ನಿರ್ಣಯಿಸಿದ ವಿಷಯಗಳ ಬಗ್ಗೆ ಸರ್ಕಾರ ಏನಾದರೂ ಆಸಕ್ತಿ ತೋರದಿದ್ದಲ್ಲಿ ಮುಂದೆ ಇಂಥ ಸಮ್ಮೇಳನಗಳನ್ನೆಲ್ಲ ಬಹಿಷ್ಕರಿಸುವ" ಕುತೂಹಲಕರ ನಿರ್ಣಯವೊಂದನ್ನು ಇಲ್ಲಿ ಈಚೆಗೆ ನಡೆದ ಜನಸಂಖ್ಯಾ ಸಮ್ಮೇಳನ ಅಂಗೀಕರಿಸಿತು.

ಕ್ಷೇತ್ರಾಭಿವೃದ್ಧಿ ಅಧಿಕಾರಿ ವೆಂಕಟೇಶ ಪ್ರಸಾದ್ ಅಧ್ಯಕ್ಷತೆಯಲ್ಲಿ ಪುರಸಭಾಧ್ಯಕ್ಷ ಕೆ.ಆರ್. ಅಣ್ಣಯ್ಯ ಹೆಗ್ಡೆ ಸಮ್ಮೇಳನವನ್ನು ಉದ್ಘಾಟಿಸಿದರು. ಜೆ.ಸಿ.ಬಿ.ಎಂ. ಕಾಲೇಜು ವೈಸ್ ಪ್ರಿನ್ಸಿಪಾಲ್ ಎ. ಕೆ. ಭಟ್ ಮುಖ್ಯ ಭಾಷಣಕಾರರಾಗಿದ್ದರು.

ಸಮ್ಮೇಳನದಲ್ಲಿ ಅಷ್ಟೇನೂ ಪ್ರತಿನಿಧಿಗಳು ಭಾಗವಹಿಸಿರದಿದ್ದರೂ ಸಮ್ಮೇಳನ ವಿಚಾರಪೂರಿತವಾಗಿತ್ತು. ಕಡೆಯಲ್ಲಿ ಸಮ್ಮೇಳನಾರ್ಥಿಗಳಲ್ಲಿ ನಡೆದ ಚರ್ಚೆಯಲ್ಲಿ ಜನಸಂಖ್ಯೆ ಕುರಿತ ಸಮಸ್ಯೆಗಳಿಗೆ ಆರ್ಥಿಕ ಸಮಾನತೆಯೆ ಮೂಲಪರಿಹಾರವೆಂಬ ಅಭಿಪ್ರಾಯ ವ್ಯಕ್ತವಾಯಿತು.

ಇಂಥ ಸಮ್ಮೇಳನಗಳು ಕೇವಲ ಅಲಂಕಾರದ ಪದ್ಧತಿಗಳಾಗಬಾರದು ಎಂದೂ ನಿರ್ಣಯ ಎಚ್ಚರಿಸಿತು.

ಕೊಪ್ಪ ತಾ|| ಪ್ರಾಥಮಿಕ ಶಿಕ್ಷಕರ ಸಮ್ಮೇಳನ

ಕೊಪ್ಪ: ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಶಾಲಾಭಿವೃದ್ಧಿ ಸಮಿತಿಗಳ ತಾ|| ಮಟ್ಟದ ಸಮ್ಮೇಳನ ಇಲ್ಲಿ ಏ. 10ರಂದು ಪಿ. ಜಿ. ಗುರ್ಜರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಮಂತ್ರಿ ಗೋವಿಂದ ಗೌಡರು, ಶಿಕ್ಷಕರು ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯಿಂದಿರಲು ಕರೆನೀಡಿದರು. ಮುಖ್ಯ ಅತಿಥಿಗಳಾಗಿದ್ದ ಇಲ್ಲಿನ ಪ್ರ. ದ. ಕಾಲೇಜಿನ ಹಿರಿಯ ಉಪನ್ಯಾಸಕರಾದ ಮಲ್ಲಿಕಾರ್ಜುನಯ್ಯ ಅವರು, ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಮಸ್ಯೆಗಳನ್ನು ವಿವರಿಸಿ, ಈ ಬಗ್ಗೆ ಗಮನ ಕೊಡದ ಬಗ್ಗೆ ಸರ್ಕಾರವನ್ನು ಖಂಡಿಸಿದರು.

ಜಿಲ್ಲಾ ಶಿಕ್ಷಣಾಧಿಕಾರಿ ಪೆಮ್ಮಯ್ಯ ಅವರು ಸಮಾರೋಪ ಭಾಷಣ ಮಾಡಿದರು. ಶಂಕರ್ ಕಂಪನಿಯ ಎ. ಮನೋಹರರಾವ್ ಅವರು 5 ಮಂದಿ ಅತ್ಯುತ್ತಮ ಶಿಕ್ಷಕರು ಮತ್ತು ಅತ್ಯುತ್ತಮ ಶಾಲಾಭಿವೃದ್ಧಿ ಸಮಿತಿಗೆ ಬಹುಮಾನ ವಿತರಣೆ ಮಾಡಿದರು.

ತಾ|| ಶಿಕ್ಷಣಾಧಿಕಾರಿ ಹೆಚ್. ಎಂ. ಮಲ್ಲಯ್ಯ ಸ್ವಾಗತಿಸುತ್ತ ಈ ಸಮ್ಮೇಳನ 61 ವರ್ಷದಿಂದ ನಡೆಯುತ್ತಿದೆ ಎಂದರು.

ಅನಾರೋಗ್ಯದ - ಕಾರಣ 7-4-85ರ ನಮ್ಮ ಪತ್ರಿಕೆ ಪ್ರಕಟಿಸಲಾಗಲಿಲ್ಲ.

—ಸಂ.

ಟಿ. ಆರ್. ಆಚಾರ್ಯರ ಸಾಧನೆ: ಸತತ ಎರಡನೇ ಬಾರಿಗೆ ಕೋಟಿ ರೂ. ವಿಮೆ

ಕೊಪ್ಪ: ಇಲ್ಲಿನ ಜೀವ ವಿಮಾ ಅಭಿವೃದ್ಧಿ ಅಧಿಕಾರಿ ಟಿ.ಆರ್. ಆಚಾರ್ಯ ಅವರು ಸತತ ಎರಡನೇ ಬಾರಿಗೆ 1 ಕೋಟಿ ರೂ. ವ್ಯವಹಾರ ಮಾಡಿದ್ದಾರೆ. ಈ ವರ್ಷ ಅವರು ಮಾಡಿರುವ ವ್ಯವಹಾರ 1 ಕೋಟಿ 6 ಲಕ್ಷ ರೂ. ಗಳಾಗಿದೆ.

ಕಳೆದ ವರ್ಷ ಆಚಾರ್ಯ ಅವರು ಚಿಕ್ಕಮಗಳೂರು ಶಾಖೆಗೇ ಮೊಟ್ಟ ಮೊದಲಿಗರಾಗಿ 1 ಕೋಟಿ ರೂ. ವ್ಯವಹಾರ ಸಾಧಿಸಿ, ಪ್ರಶಸ್ತಿ ಪಡೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ವರ್ಷ ಕೂಡ ಚಿಕ್ಕಮಗಳೂರು ಶಾಖೆಯಲ್ಲಿ ಈ ಸಾಧನೆ ಮಾಡಿದವರು ಇವರೊಬ್ಬರೇ ಆಗಿದ್ದು ಶಾಖೆಯಲ್ಲಿ ತಮ್ಮ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

ಶೃಂಗೇರಿ ದಫೇದಾರ್ ಸುಬ್ಬರಾವ್ ಸಸ್ಪೆಂಡ್

ಶೃಂಗೇರಿ: ಇಲ್ಲಿನ ಪೋಲೀಸ್ ಠಾಣೆಯ ದಫೇದಾರ್ ಸುಬ್ಬರಾವ್ ಕಡೆಗೂ ಸಸ್ಪೆಂಡ್ ಆಗಿದ್ದಾರೆ. ಕೆಲಸದ ಅವಧಿಯುಲ್ಲಿ ಪಾನಮತ್ತರಾಗಿರುವುದೂ ಸೇರಿದಂತೆ ಹಲವು ಆಪಾದನೆಗಳಿಗಾಗಿ ಇವರನ್ನು ಎಸ್.ಪಿ. ಸಸ್ಪೆಂಡ್ ಮಾಡಿರುವುದಾಗಿ ವರದಿಯಾಗಿದೆ.

ಸದಾ ಕಂಠಮಟ್ಟ ಕುಡಿದು ಕೊಂಡು, ಠಾಣೆಗೆ ದೂರು ನೀಡಲು ಬಂದವರನ್ನು ಅಥವಾ ಕ್ಷುಲ್ಲಕ ದೂರುಗಳ ಮೇಲೆ ತಾನು 'ತನಿಖೆ'ಗೆ ಹೋದಾಗ ಸಂಬಂಧಪಟ್ಟವರನ್ನು ಪೀಡಿಸಿ, ದಂಡಿಸಿ, ದುಡ್ಡು ಕೀಳುವುದೇ ಈತನ ಪೋಲಿಸ್ ವೃತ್ತಿಯಾಗಿತ್ತೆನ್ನಲಾಗಿದೆ.

ಹರಿಹರಪುರ, ಜಯಪುರ, ಬಾಳೆಹೊನ್ನೂರುಗಳಲ್ಲೂ ಇಂಥ ಒಂದೆರಡು 'ಕೇಸ್'ಗಳಿರುವುದು ಎಸ್. ಪಿ. ಯವರ ಗಮನಕ್ಕೆ ಬಂದಿದೆಯೋ ಎಂಬುದನ್ನೂ ಕಾದುನೋಡಬೇಕಾಗಿದೆ.

ಶಾನೊಳ್ಳಿಯಲ್ಲಿ ಗ್ರಾ. ಬ್ಯಾಂಕಿನ 31ನೇ ಶಾಖೆ

(ವರದಿ: ಹೆಗ್ಗಾರು ಜಯಂತ್)

ಶಾನುವಳ್ಳಿ: 'ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕ್'ನ 31 ನೇ ಶಾಖೆ ಮಾ. 28 ರಂದು ಇಲ್ಲಿ ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ ಬಾಲಪ್ಪ ಅವರಿಂದ ಉದ್ಘಾಟಿಸಲ್ಪಟ್ಟಿತು. ಮಾಜಿ ಪಂಚಾಯ್ತಿ ಅಧ್ಯಕ್ಷ ಮೂಗ ಶ್ರೀನಿವಾಸ್ ಮತ್ತು ಜಿಲ್ಲಾ ಗ್ರಂಥಾಧಿಕಾರಿ ಹೊಂಬಾಳ್ ಮುಖ್ಯ ಅತಿಥಿಗಳಾಗಿದ್ದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಕೆ. ಅಚ್ಯುತ ಪೈ ಮಾತನಾಡುತ್ತ, ಸಹಕಾರ ಸಂಘ ಮತ್ತು ವಾಣಿಜ್ಯ ಬ್ಯಾಂಕ್- ಈ ಎರಡರ ಕೆಲವು ಉತ್ತಮ ಆದರ್ಶಗಳನ್ನು ಒಟ್ಟುಗೂಡಿಸಿ ಗ್ರಾಮೀಣ ಬ್ಯಾಂಕ್‌ಗಳನ್ನು ರಚಿಸಲಾಗಿದೆ. 1975 ರಿಂದ ಈವರೆಗೆ ದೇಶಾದ್ಯಂತ ಸುಮಾರು 9000 ಶಾಖೆಗಳನ್ನು ಸ್ಥಾಪಿಸಿದ್ದು, ಇವುಗಳಲ್ಲಿ 1100 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದೆ ಎಂದರು.

ವಾಣಿಜ್ಯ ಬ್ಯಾಂಕುಗಳು ತಮ್ಮ ಬಂಡವಾಳದ ಶೇ. 40ರಷ್ಟನ್ನು ಆದ್ಯತೆಯ ರಂಗಕ್ಕೆ ಖರ್ಚುಮಾಡಿದರೆ,ನಾವು ನೂರಕ್ಕೆ ನೂರರಷ್ಟು ಆದ್ಯತೆಯ ರಂಗಕ್ಕೇ ವಿನಿಯೋಗಿಸುತ್ತೇವೆ ಎಂದರು.

'ನಬಾರ್ಡ್' ಆದೇಶದಂತೆ 8 ಎಕರೆಗಿಂತ ಕಡಿಮೆ ಜಮೀನು ಇರುವವರಿಗೆ ಮೊದಲ ಆದ್ಯತೆ ಕೊಡಲಾಗುತ್ತದೆ. ವಾರ್ಷಿಕ ಆದಾಯ 6500 ರೂ.ಗಿಂತ ಕಡಿಮೆ ಇರುವವರು ವಿವಿಧ ಯೋಜನೆಗಳ ಪ್ರಯೋಜನ ಪಡೆಯಬಹುದು ಎಂದು ಅವರು ತಿಳಿಸಿದರು

ಸಂಪೂರ್ಣ ಸರ್ಕಾರಿ ರಂಗದ ಬ್ಯಾಂಕ್ ಇದಾಗಿದ್ದು ಜನರು ಇದರಲ್ಲಿ ಠೇವಣಿ ಇರಿಸಲು ಅನುಮಾನ ಪಡಬೇಕಾಗಿಲ್ಲವೆಂದು ಅವರು ಹೇಳಿದರು.

ನರಸಿಂಗರಾವ್ ಸ್ವಾಗತಿಸಿ,ರಾಜಶೇಖರ್ ವಂದಿಸಿದರು.

ಈ ಶಾಖೆಯಲ್ಲಿ 200 ಖಾತೆಗಳು ತೆರೆಯಲ್ಪಟ್ಟಿದ್ದು 38,000 ರೂ. ಠೇವಣಿ ಸಂಗ್ರಹವಾಗಿದೆ.

ನೂತನ ಪದಾಧಿಕಾರಿಗಳು

ಕೊಪ್ಪ ತಾ।। ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಮೇಲ್ಕಂಡ ಸಂಘದ ಮಹಾಸಭೆ ಏ. 7 ರಂದು ಸಂಘದ ಅಧ್ಯಕ್ಷರಾಗಿದ್ದ ಅಚ್ಯುತ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಸಂಘದ ಅಧ್ಯಕ್ಷ ಕೆ. ಲಕ್ಷ್ಮಣ್, ಪ್ರಧಾನ ಕಾರ್ಯದರ್ಶಿ ಎಸ್. ಸಿ. ರಾಜಣ್ಣ ಉಪಸ್ಥಿತರಿದ್ದರು ನೂತನ ಸಾಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾದರು: ಕೆ.ಎಂ. ಶೇಷಣ್ಣ ನಾಯ್ಕ್ (ಅಧ್ಯಕ್ಷ), ಕೆ.ಕೆ.ರಾಮಮೂರ್ತಿ, ಶ್ರೀಮತಿ ನಸೀಮ್ ಫಾತಿಮ (ಉಪಾಧ್ಯಕ್ಷರು), ಹೆಚ್. ಟಿ. ರುದ್ರಪ್ಪ (ಪ್ರಧಾನಕಾರ್ಯದರ್ಶಿ), ಎ.ಪಿ.ಶ್ರೀನಿವಾಸ್ (ಸಹಕಾರ್ಯದರ್ಶಿ).ಟಿ.ಆರ್.ಕೃಷ್ಣ ಮೂರ್ತಿ, ಚಂದ್ರಶೇಖರ ಭಟ್ಟ,ನಾಗರಾಜಪ್ಪ,ಸುಬ್ಬಾನಾಯ್ಕ್ (ಸಂಘಟನಾ ಕಾರ್ಯದರ್ಶಿಗಳು) ಮತ್ತು ರಂಗಪ್ಪ (ಖಜಾಂಚಿ.)

ಕೊಪ್ಪ ತಾ।। ಬ್ರಾಹ್ಮಣ ಮಹಾಸಭೆ

ಈಚೆಗೆ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ಪಿ.ಜಿ. ಗುರ್ಜರ್ ಅಧ್ಯಕ್ಷರಾಗಿಯೂ, ಎ. ಎಸ್. ನಾಗೇಂದ್ರ ಭಟ್ಟ ಕಾರ್ಯದರ್ಶಿಯಾಗಿಯೂ ಪುನರಾಯ್ಕೆಯಾದರು. ಬಿ.ವೆಂಕಟೇಶಭಟ್ಟ (ಉಪಾಧ್ಯಕ್ಷರು), ಎ. ಮನೋಹರ ರಾವ್ (ಖಜಾಂಚಿ), ಜೆ.ಆರ್.ಕೆ. ರಾಮ ಭಟ್, ಹೆಚ್. ವಿ. ಸುಬ್ಬರಾವ್(ಸಹಕಾರ್ಯದರ್ಶಿ)

ಸಾಮೂಹಿಕ ಉಪನಯನ

ಕೊಪ್ಪ: ಇಲ್ಲಿನ ಬ್ರಾಹ್ಮಣ ಮಹಾಸಭೆ ಮತ್ತು ಹರಿಹರಪುರ ಸದ್ಗುರು ಸೇವಾ ಸಮಿತಿಯ ಆಶ್ರಯದಲ್ಲಿ 25-4-1985ರಂದು ಹರಿಹರಪುರದ ಶಂಕರ ಸದನದಲ್ಲಿ ಸಾಮೂಹಿಕ ಉಪನಯನ ನಡೆಯುತ್ತದೆ. ಸೇರಲಿಚ್ಛಿಸುವವರು ಮಹಾಸಭೆಯ ಕಚೇರಿಯಲ್ಲಿ ಅಥವಾ ಹರಿಹರಪುರ ಮಠದಲ್ಲಿ ವಿಚಾರಿಸಬಹುದು.

ಜಯಂತಿ

ಏ. 21ರಿಂದ 25ರವರೆಗೆ ಪರಶುರಾಮ ಜಯಂತಿ, ರಾಮಾನುಜ ಜಯಂತಿ, ಶಂಕರ ಜಯಂತಿ ಉತ್ಸವಗಳು ಮಹಾಸಭೆಯ ಆಶ್ರಯದಲ್ಲಿ ನಡೆಯುತ್ತವೆ.

ಬಪ್ಪುಂಜಿಗೆ ಪ್ರೌಢಶಾಲೆ ಮಂಜೂರ್ಮಾಡಲು ಒತ್ತಾಯ

ಕೊಪ್ಪ: ಇಲ್ಲಿಗೆ ಸಮೀಪದ ಬಪ್ಪುಂಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಬಿ.ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಏ.2ರಂದು ನಡೆಯಿತು.

ಶಾಲಾ ತನಿಖಾಧಿಕಾರಿ ಎನ್. ಆರ್. ಶ್ರೀನಿವಾಸ್ ಬಹುಮಾನ ವಿತರಣೆ ಮಾಡಿ ಶಾಲಾಭಿವೃದ್ಧಿ ಸಮಿತಿಯವರು ಈ ವರ್ಷ ಶಾಲೆಗೆ ನೀಡಿದ 4234 ರೂ. ಕೊಡುಗೆಯನ್ನು ಪ್ರಶಂಸಿಸಿದರು. ಶಾಲಾ ಮಕ್ಕಳು ಎರಡು ಮೇಜುಗಳನ್ನು (ಸುಮಾರು 900 ರೂ.) ಶಾಲೆಗೆ ಕಾಣಿಕೆಯಾಗಿ ಕೊಟ್ಟರು

ಬಿ.ಆರ್. ಪರಮೇಶ್ವರ ಅವರು ಮಾತನಾಡಿ ಬಪ್ಪುಂಜಿಗೆ ಪ್ರೌಢಶಾಲೆಯ ಅಗತ್ಯ ಇರುವುದನ್ನೂ ಈ ಬಗ್ಗೆ ಈಗ್ಗೆ ಕೆಲವು ವರ್ಷಗಳಿಂದಲೂ ಸುತ್ತಮುತ್ತಲ ಜನ ಸರ್ಕಾರಕ್ಕೆ ಮನವಿ ಮಾಡುತ್ತಿರುವುದನ್ನೂ ಒತ್ತಿಹೇಳಿದರು. ಶಾಲಾ ಶಿಕ್ಷಕ ಎಂ.ಡಿ.ತಿಮ್ಮಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.

ಮುಖ್ಯ ಶಿಕ್ಷಕರಾದ ಕೆ.ಆರ್. ಕೃಷ್ಣಮೂರ್ತಿ ಸ್ವಾಗತಿಸಿ ಜಿ. ಕೆ. ಗುರ್ಜರ್ ವಂದಿಸಿದರು. ಟಿ.ಜಯಪ್ಪ ಮತ್ತು ಸುಜಾತ ಲಕ್ಷ್ಮಿ ಇವರ ನೇತೃತ್ವದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

(ವರದಿ:-ಕೆ.ರಾ. ಕೃಷ್ಣಮೂರ್ತಿ)

ಸೇತುವೆ ಮಂಜೂರಾಗಿದ್ದರೂ ಸಾರವೇ ಗತಿ!

ಕೆಳಗೆ ಕೆಂಪನೆಯ ಕಲುಕು ನೀರು ಬೀಸಿ ಹರಿವ ಅಥವಾ ಕಪ್ಪನೆಯ ಆಳದ ಹೊಳೆ.ಕಾಲ ತಳದಲ್ಲಿ ತೂಗಾಡುವ ಬಡಿಗೆ. ಅದರ ಮೇಲೆ ಹತ್ತಿಪ್ಪತ್ತು ಗಜ ಸರ್ಕಸ್ ನಡಿಗೆ. ಇದು ಮಲೆನಾಡಿನಲ್ಲಿ ಎಲ್ಲೆಲ್ಲೂ ಸಿಗುವ ಸಂಕ-ಸಾರಗಳ ವರ್ಣನೆ.

ಬೇಸಿಗೆಯಲ್ಲಿ ಆ ಹಳ್ಳವೋ, ಹೊಳೆಯೋ, ಅದನ್ನು ದಾಟಲು ಆಗುತ್ತದೆ. ಮಳೆಗಾಲದಲ್ಲಿ ಸಂಕವೇ ಗತಿ. ಆದಕ್ಕಿಂತಲೂ ಬೇಸಿಗೆಯಲ್ಲಿ ಮಳೆ ಬಂದು ಹಳ್ಳ ಕಟ್ಟಿದರೆ ಇನ್ನೂ ಕಷ್ಟ. ಏಕೆಂದರೆ ಆಗ ಸಂಕವೂ ಬಹಳ ಶಿಥಿಲವಾಗಿರುತ್ತದೆ.

ಈ ಸಂಪಾದಕ ಈಚೆಗೆ ಇಂಥ ಒಂದು ಸಂಕ ದಾಟಲು ಹೋಗಿ, ದಾಟಲಾಗದೆ ಹಿಂದಕ್ಕೇ ಬರಬೇಕಾಯಿತು.

ಲೋಕನಾಥಪುರದಿಂದ ಆರದಾಳು, ಹೆದ್ದೆ ಕಡೆ ಹೋಗ ಬೇಕಾದರೆ ಸೀತಾ ನದಿ ಎಂಬ ದೊಡ್ಡ ಹಳ್ಳ ದಾಟಬೇಕು.ಅದಕ್ಕೊಂದು ಸಂಕವಿದೆ. ಮೊನ್ನೆ ಪತ್ರಿಕೆಯ ಚಂದಾ ಸಂಗ್ರಹಣೆಗಾಗಿ ಆ ಕಡೆ ಹೋಗಬೇಕಾಗಿತ್ತು. ಆದರೆ ಏ. 3ರಂದು ಭಾರಿ ಮಳೆ ಬಿದ್ದು ಹಳ್ಳದಲ್ಲಿ ಕೆಂಪು ಕಲುಕು ನೀರು ತುಂಬಿ ಹರಿಯುತ್ತಿತ್ತು. ಸಾರದಲ್ಲೇ ಹೋಗೋಣವೆಂದು ಹೋದೆ. ಸಾರದ ಕಿರು ಬಡಿಗೆಯೇ ಒಂದು ಸಂಕದಷ್ಟು ಉದ್ದವಿದೆ. ಆದರಲ್ಲೂ ಎರಡೇ ಬಡಿಗೆ ಉಳಿದಿತ್ತು. ಅದೂ ತೂಗುತ್ತಿತ್ತು. ಹಿಡಿಬಳ್ಳಿ ಕೈಗೆ ಸುಲಭವಾಗಿ ಸಿಗುವಂತಿರಲಿಲ್ಲ. ಕಿರುಬಡಿಗೆಯನ್ನೇ ಅರ್ಧಕ್ಕಿಂತ ಮುಂದೆ ದಾಟಲಾಗದೆ ಹಿಂದೆ ಬಂದೆ.

ಕಿರುಬಡಿಗೆಯ ತಳದಲ್ಲಿ ಮರದ ದೊಡ್ಡ ಹರೆಯಿದೆ. ಆದರ ಮೇಲೆ ಹೋಗಿ ಸಂಕ ಹತ್ತೋಣವೆಂದು ನೋಡಿದೆ. ಕಾಲುಬುಡದಲ್ಲೇ ಸುಳಿ ಸುಳಿಯಾದ ಕೆಂಪು ನೀರು. ಧೈರ್ಯವಾಗಲಿಲ್ಲ. ಅರ್ಧಕ್ಕೇ ಹಿಂದಿರುಗಬೇಕಾಯಿತು.

ಮಲೆನಾಡಿನಲ್ಲೇ ಹುಟ್ಟಿ ಬೆಳೆದು ಇಂಥ ನಾಲ್ಕಾರು ತರದ ಸಂಕ ದಾಟಿ ಅನುಭವವಿರುವ ನನಗೇ ಹೀಗಾದರೆ ಬೇರೆಯವರಿಗೆ ಹೇಗೆ ಎಂದು ಆಶ್ಚರ್ಯಪಡುತ್ತ ಹಿಂದೆ ಬಂದೆ.

ಈ ಹಳ್ಳಕ್ಕೆ ಒಂದು ಕಾಲು ಸೇತುವೆ ಮಂಜೂರಾಗಿದೆಯಂತೆ. ಆದರೆ ಹೋದ ವರ್ಷ ಹಣವಿಲ್ಲದೆ ಸೇತುವೆ ಆಗಲಿಲ್ಲ. ಈಗ ಸೇತುವೆ ಇಲ್ಲಿ ಆಗ ಬೇಕೋ, ಸ್ವಲ್ಪ ಕೆಳಗೆ. ಪಾಳ್ಯದ ಮಕ್ಕಿ ದೇವಸ್ಥಾನದ ಬಳಿಯಲ್ಲಿ ಆಗಬೇಕೋ ಎಂಬ ಜಿಜ್ಞಾಸೆಯಲ್ಲಿ ಹೊತ್ತು ಹೋಗುತ್ತಿರುವಂತಿದೆ. ಇದಕ್ಕೆ ಇನ್ನೂ ಎಷ್ಟು ಕಾಲ ಹೋಗಬೇಕೋ ಆ ಇಲಾಖೆಗೇ ಗೊತ್ತು ಎನ್ನುತ್ತಾರೆ ಇಲ್ಲಿನ ಜನ.

ಉತ್ತಮೇಶ್ವರದಲ್ಲಿ ಲಯನ್ಸ್ ಆಶ್ರಯದಲ್ಲಿ 160 ಮಂದಿಗೆ ಉಚಿತ ಚಿಕಿತ್ಸೆ

ಉತ್ತಮೇಶ್ವರ: ಇಲ್ಲಿ ಮಾ. 31 ರಂದು ಸ್ಟೇಟ್ ಬ್ಯಾಂಕ್ ಮತ್ತು ಕೊಪ್ಪದ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಸ್ತ್ರೀರೋಗ ಮತ್ತು ಮಕ್ಕಳ ರೋಗಗಳ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ನಡೆಯಿತು. ಶೃಂಗೇರಿಯ ಧನ್ವಂತರಿ ಆಸ್ಪತ್ರೆಯ ತಜ್ಞರುಗಳಾದ ಡಾ।। ಜನಾರ್ದನ ಅಂಕೋಲೇಕರ್ (ಸ್ತ್ರೀರೋಗ) ಮತ್ತು ಡಾ।। ಸುಬ್ಬಲಕ್ಷ್ಮಿ (ಮಕ್ಕಳ ತಜ್ಞೆ) ಇವರುಗಳು ಭಾಗವಹಿಸಿದ್ದು, ಸುಮಾರು 60 ಮಕ್ಕಳೂ ಸೇರಿದಂತೆ ಒಟ್ಟ 160 ಮಂದಿ ಶಿಬಿರದ ಪ್ರಯೋಜನ ಪಡೆದರು. ಕೊಪ್ಪದ ಬಾಲವಿಕಾಸ ಯೋಜನಾಧಿಕಾರಿ ಟಿ. ಪಿ. ಬೋರಯ್ಯ ಅವರೂ ಭಾಗವಹಿಸಿದ್ದು, ತಾಯಿ-ಮಗುವಿನ ಆರೋಗ್ಯದ ಬಗ್ಗೆ ಅತ್ಯುತ್ತಮವಾದ ಭಿತ್ತಿ ಚಿತ್ರಗಳನ್ನೂ ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರು.

ಉತ್ತಮೇಶ್ವರ ಆಸ್ಪತ್ರೆ ಕಟ್ಟಡ ಉದ್ಘಾಟನೆ

ಉತ್ತಮೇಶ್ವರ: ಇಲ್ಲಿನ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವನ್ನು ಜಿಲ್ಲಾ ಮಂತ್ರಿ ಗೋವಿಂದ ಗೌಡರು ಏ. 9 ರಂದು ಉದ್ಘಾಟಿಸಿದರು. ಎಸ್.ವಿ.ಆನಂದರಾಂ ಭಟ್ಟರು ಅಧ್ಯಕ್ಷತೆ ವಹಿಸಿದ್ದು, ಬಿ.ಜಿ. ಚಿದಂಬರ್, ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಲೋ।। ಇಲಾಖೆ ಎಕ್ಸಿಕ್ಯುಟಿವ್ ಇಂಜಿನಿಯರ್ ರಾಧಾಕೃಷ್ಣ ರೆಡ್ಡಿ ಮುಖ್ಯ ಅತಿಥಿಗಳಾಗಿದ್ದರು.

ಗ್ರಾಮದ ಬೇಡಿಕೆಗಳ ಬಗ್ಗೆ ಮಂತ್ರಿಗಳಿಗೆ ಮನವಿ ಪತ್ರ ಅರ್ಪಿಸಲಾಯಿತು. ಆಸ್ಪತ್ರೆ ಕಟ್ಟಡದ ಇಬ್ಬರು ಸ್ಥಳದಾನಿಗಳು ಮತ್ತು ಕಟ್ಟಡ ಕಂಟ್ರಾಕ್ಟರ್ ಕಾಡಪ್ಪ ಗೌಡ ಇವರುಗಳನ್ನು ಸನ್ಮಾನಿಸಲಾಯಿತು. ಉತ್ತಮ ಕೆಲಸ ನಿರ್ವಹಿಸಿದ ಆರೋಗ್ಯ ಕಾರ್ಯಕರ್ತ /ಕಾರ್ಯ ಕರ್ತೆಯರಿಗೆ ಡಿ. ಹೆಚ್. ಓ ಬಹುಮಾನ ಹಂಚಿದರು.

ಆಸ್ಪತ್ರೆಯ ವೈದ್ಯಾಧಿಕಾರಿ ಡಾ।। ಕೋದಂಡರಾಂ ಸ್ವಾಗತಿಸಿ, ಹೆಚ್.ವಿ. ಪ್ರಭಾಕರ್ ವಂದಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸೀವಾನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.

ಶಾನೊಳ್ಳಿಯಲ್ಲಿ ಗ್ರಾ. ಬ್ಯಾಂಕಿನ 31ನೇ ಶಾಖೆ

(ವರದಿ: ಹೆಗ್ಗಾರು ಜಯಂತ್)

ಶಾನುವಳ್ಳಿ: 'ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕ್''ನ 31 ನೇ ಶಾಖೆ ಮಾ. 28 ರಂದು ಇಲ್ಲಿ ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ ಬಾಲಪ್ಪ ಅವರಿಂದ ಉದ್ಘಾಟಿಸಲ್ಪಟ್ಟಿತು. ಮಾಜಿ ಪಂಚಾಯ್ತಿ ಅಧ್ಯಕ್ಷ ಮೂಗ ಶ್ರೀನಿವಾಸ್ ಮತ್ತು ಜಿಲ್ಲಾ ಗ್ರಂಥಾಧಿಕಾರಿ ಹೊಂಬಾಳ್ ಮುಖ್ಯ ಅತಿಥಿಗಳಾಗಿದ್ದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಕೆ. ಅಚ್ಯುತ ಪೈ ನೂತನಾಡುತ್ತ, ಸಹಕಾರ ಸಂಘ ಮತ್ತು ವಾಣಿಜ್ಯ ಬ್ಯಾಂಕ್- ಈ ಎರಡರ ಕೆಲವು ಉತ್ತಮ ಆದರ್ಶಗಳನ್ನು ಒಟ್ಟುಗೂಡಿಸಿ ಗ್ರಾಮೀಣ ಬ್ಯಾಂಕ್‌ಗಳನ್ನು ರಚಿಸಲಾಗಿದೆ. 1975 ರಿಂದ ಈವರೆಗೆ ದೇಶಾದ್ಯಂತ ಸುಮಾರು 9000 ಶಾಖೆಗಳನ್ನು ಸ್ಥಾಪಿಸಿದ್ದು, ಇವುಗಳಲ್ಲಿ 1100 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದೆ ಎಂದರು.

ವಾಣಿಜ್ಯ ಬ್ಯಾಂಕುಗಳು ತಮ್ಮ ಬಂಡವಾಳದ ಶೇ. 40ರಷ್ಟನ್ನು ಆದ್ಯತೆಯ ರಂಗಕ್ಕೆ ಖರ್ಚುಮಾಡಿದರೆ,ನಾವು ನೂರಕ್ಕೆ ನೂರರಷ್ಟು ಆದ್ಯತೆಯ ರಂಗಕ್ಕೇ ವಿನಿಯೋಗಿಸುತ್ತೇವೆ ಎಂದರು.

'ನಬಾರ್ಡ್' ಆದೇಶದಂತೆ 8 ಎಕರೆಗಿಂತ ಕಡಿಮೆ ಜಮೀನು ಇರುವವರಿಗೆ ಮೊದಲ ಆದ್ಯತೆ ಕೊಡಲಾಗುತ್ತದೆ. ವಾರ್ಷಿಕ ಆದಾಯ 6500 ರೂ.ಗಿಂತ ಕಡಿಮೆ ಇರುವವರು ವಿವಿಧ ಯೋಜನೆಗಳ ಪ್ರಯೋಜನ ಪಡೆಯಬಹುದು ಎಂದು ಅವರು ತಿಳಿಸಿದರು.

ಸಂಪೂರ್ಣ ಸರ್ಕಾರಿ ರಂಗದ ಬ್ಯಾಂಕ್ ಇದಾಗಿದ್ದು ಜನರು ಇದರಲ್ಲಿ ಠೇವಣಿ ಇರಿಸಲು ಅನುಮಾನ ಪಡಬೇಕಾಗಿಲ್ಲವೆಂದು ಅವರು ಹೇಳಿದರು.

ನರಸಿಂಗರಾವ್ ಸ್ವಾಗತಿಸಿ,ರಾಜಶೇಖರ್ ವಂದಿಸಿದರು.

ಈ ಶಾಖೆಯಲ್ಲಿ 200 ಖಾತೆಗಳು ತೆರೆಯಲ್ಪಟ್ಟಿದ್ದು 38,000 ರೂ. ಠೇವಣಿ ಸಂಗ್ರಹವಾಗಿದೆ.

ನೂತನ ಪದಾಧಿಕಾರಿಗಳು

ಕೊಪ್ಪ ತಾ|| ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಮೇಲ್ಕಂಡ ಸಂಘದ ಮಹಾಸಭೆ ಏ. 7 ರಂದು ಸಂಘದ ಅಧ್ಯಕ್ಷರಾಗಿದ್ದ ಅಚ್ಯುತರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಸಂಘದ ಅಧ್ಯಕ್ಷ ಕೆ. ಲಕ್ಷ್ಮಣ್, ಪ್ರಧಾನ ಕಾರ್ಯದರ್ಶಿ ಎಸ್. ಸಿ. ರಾಜಣ್ಣ ಉಪಸ್ಥಿತರಿದ್ದರು ನೂತನ ಸಾಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾದರು: ಕೆ.ಎಂ. ಶೇಷಣ್ಣ ನಾಯ್ಕ್ (ಅಧ್ಯಕ್ಷ), ಕೆ.ಕೆ.ರಾಮಮೂರ್ತಿ, ಶ್ರೀಮತಿ ನಸೀಮ್ ಫಾತಿಮ (ಉಪಾಧ್ಯಕ್ಷರು), ಹೆಚ್. ಟಿ. ರುದ್ರಪ್ಪ (ಪ್ರಧಾನಕಾರ್ಯದರ್ಶಿ), ಎ.ಪಿ.ಶ್ರೀನಿವಾಸ್ (ಸಹಕಾರ್ಯದರ್ಶಿ).ಟಿ.ಆರ್.ಕೃಷ್ಣ ಮೂರ್ತಿ, ಚಂದ್ರಶೇಖರ ಭಟ್ಟ,ನಾಗರಾಜಪ್ಪ,ಸುಬ್ಬಾನಾಯ್ಕ್ (ಸಂಘಟನಾ ಕಾರ್ಯದರ್ಶಿಗಳು) ಮತ್ತು ರಂಗಪ್ಪ (ಖಜಾಂಚಿ.)

ಕೊಪ್ಪ ತಾ|| ಬ್ರಾಹ್ಮಣ ಮಹಾಸಭೆ

ಈಚೆಗೆ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ಪಿ.ಜಿ. ಗುರ್ಜರ್ ಅಧ್ಯಕ್ಷರಾಗಿಯೂ, ಎ೯. ಎಸ್. ನಾಗೇಂದ್ರ ಭಟ್ಟ ಕಾರ್ಯದರ್ಶಿಯಾಗಿಯೂ ಪುನರಾಯ್ಕೆಯಾದರು. ಬಿ.ವೆಂಕಟೇಶಭಟ್ಟ (ಉಪಾಧ್ಯಕ್ಷರು), ಎ. ಮನೋಹರ ರಾವ್ (ಖಜಾಂಚಿ), ಜೆ.ಆರ್.ಕೆ. ರಾಮ ಭಟ್, ಹೆಚ್. ವಿ. ಸುಬ್ಬರಾವ್(ಸಹಕಾರ್ಯದರ್ಶಿ)

ಸಾಮೂಹಿಕ ಉಪನಯನ

ಕೊಪ್ಪ: ಇಲ್ಲಿನ ಬ್ರಾಹ್ಮಣ ಮಹಾಸಭೆ ಮತ್ತು ಹರಿಹರಪುರ ಸದ್ಗುರು ಸೇವಾ ಸಮಿತಿಯ ಆಶ್ರಯದಲ್ಲಿ 25-4-1985ರಂದು ಹರಿಹರಪುರದ ಅಂಬಾ ಸದನದಲ್ಲಿ ಸಾಮೂಹಿಕ ಉಪನಯನ ನಡೆಯುತ್ತದೆ. ಸೇರಲಿಚ್ಛಿಸುವವರು ಮಹಾಸಭೆಯ ಕಚೇರಿಯಲ್ಲಿ ಅಥವಾ ಹರಿಹರಪುರ ಮಠದಲ್ಲಿ ವಿಚಾರಿಸಬಹುದು.

ಜ ಯ ಂ ತಿ

ಏ. 21ರಿಂದ 25ರವರೆಗೆ ಪರಶುರಾಮ ಜಯಂತಿ, ರಾಮಾನುಜ ಜಯಂತಿ, ಶಂಕರ ಜಯಂತಿ ಉತ್ಸವಗಳು ಮಹಾಸಭೆಯ ಆಶ್ರಯದಲ್ಲಿ ನಡೆಯುತ್ತವೆ.

ಬಪ್ಪುಂಜಿಗೆ ಪ್ರೌಢಶಾಲೆ ಮಂಜೂರ್ಮಾಡಲು ಒತ್ತಾಯ

ಕೊಪ್ಪ: ಇಲ್ಲಿಗೆ ಸಮೀಪದ ಬಪ್ಪುಂಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಬಿ.ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಏ.2ರಂದು ನಡೆಯಿತು.

ಶಾಲಾ ತನಿಖಾಧಿಕಾರಿ ಎನ್. ಆರ್. ಶ್ರೀನಿವಾಸ್ ಬಹುಮಾನ ವಿತರಣೆ ಮಾಡಿ ಶಾಲಾಭಿವೃದ್ಧಿ ಸಮಿತಿಯವರು ಈ ವರ್ಷ ಶಾಲೆಗೆ ನೀಡಿದ 4234 ರೂ. ಕೊಡುಗೆಯನ್ನು ಪ್ರಶಂಸಿಸಿದರು. ಶಾಲಾ ಮಕ್ಕಳು ಎರಡು ಮೇಜುಗಳನ್ನು (ಸುಮಾರು 900 ರೂ.) ಶಾಲೆಗೆ ಕಾಣಿಕೆಯಾಗಿ ಕೊಟ್ಟರು

ಬಿ.ಆರ್. ಪರಮೇಶ್ವರ ಅವರು ಮಾತನಾಡಿ ಬಪ್ಪುಂಜಿಗೆ ಪ್ರೌಢಶಾಲೆಯ ಆಗತ್ಯ ಇರುವುದನ್ನೂ ಈ ಬಗ್ಗೆ ಈಗ್ಗೆ ಕೆಲವು ವರ್ಷಗಳಿಂದಲೂ ಸುತ್ತಮುತ್ತಲ ಜನ ಸರ್ಕಾರಕ್ಕೆ ಮನವಿ ಮಾಡುತ್ತಿರುವುದನ್ನೂ ಒತ್ತಿಹೇಳಿದರು. ಶಾಲಾ ಶಿಕ್ಷಕ ಎಂ.ಡಿ.ತಿಮ್ಮಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.

ಮುಖ್ಯ ಶಿಕ್ಷಕರಾದ ಕೆ.ಆರ್. ಕೃಷ್ಣಮೂರ್ತಿ ಸ್ವಾಗತಿಸಿ ಜಿ. ಕೆ. ಗುರ್ಜರ್ ವಂದಿಸಿದರು. ಟಿ.ಜಯಪ್ಪ ಮತ್ತು ಸುಜಾತ ಲಕ್ಷ್ಮಿ ಇವರ ನೇತೃತ್ವದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

(ವರದಿ:-ಕೆ.ರಾ. ಕೃಷ್ಣಮೂರ್ತಿ)

ಸೇತುವೆ ಮಂಜೂರಾಗಿದ್ದರೂ ಸಾರವೇ ಗತಿ!

ಕೆಳಗೆ ಕೆಂಪನೆಯ ಕಲುಕು ನೀರು ಬೀಸಿ ಹರಿವ ಅಥವಾ ಕಪ್ಪನೆಯ ಆಳದ ಹೊಳೆ.ಕಾಲ ತಳದಲ್ಲಿ ತೂಗಾಡುವ ಬಡಿಗೆ. ಅದರ ಮೇಲೆ ಹತ್ತಿಪ್ಪತ್ತು ಗಜ ಸರ್ಕಸ್ ನಡಿಗೆ. ಇದು ಮಲೆನಾಡಿನಲ್ಲಿ ಎಲ್ಲೆಲ್ಲೂ ಸಿಗುವ ಸಂಕ-ಸಾರಗಳ ವರ್ಣನೆ.

ಬೇಸಿಗೆಯಲ್ಲಿ ಆ ಹಳ್ಳವೋ, ಹೊಳೆಯೋ, ಅದನ್ನು ದಾಟಲು ಆಗುತ್ತದೆ. ಮಳೆಗಾಲದಲ್ಲಿ ಸಂಕವೇ ಗತಿ. ಅದಕ್ಕಿಂತಲೂ ಬೇಸಿಗೆಯಲ್ಲಿ ಮಳೆ ಬಂದು ಹಳ್ಳ ಕಟ್ಟಿದರೆ ಇನ್ನೂ ಕಷ್ಟ. ಏಕೆಂದರೆ ಆಗ ಸಂಕವೂ ಬಹಳ ಶಿಥಿಲವಾಗಿರುತ್ತದೆ.

ಈ ಸಂಪಾದಕ ಈಚೆಗೆ ಇಂಥ ಒಂದು ಸಂಕ ದಾಟಲು ಹೋಗಿ, ದಾಟಲಾಗದೆ ಹಿಂದಕ್ಕೇ ಬರಬೇಕಾಯಿತು.

ಲೋಕನಾಥಪುರದಿಂದ ಆರದಾಳು, ಹೆದ್ಸೆ ಕಡೆ ಹೋಗ ಬೇಕಾದರೆ ಸೀತಾ ನದಿ ಎಂಬ ದೊಡ್ಡ ಹಳ್ಳ ದಾಟಬೇಕು.ಅದಕ್ಕೊಂದು ಸಂಕವಿದೆ. ಮೊನ್ನೆ ಪತ್ರಿಕೆಯ ಚಂದಾ ಸಂಗ್ರಹಣೆಗಾಗಿ ಆ ಕಡೆ ಹೋಗಬೇಕಾಗಿತ್ತು. ಆದರೆ ಏ. 3ರಂದು ಭಾರಿ ಮಳೆ ಬಿದ್ದು ಹಳ್ಳದಲ್ಲಿ ಕೆಂಪು ಕಲುಕು ನೀರು ತುಂಬಿ ಹರಿಯುತ್ತಿತ್ತು. ಸಾರದಲ್ಲೇ ಹೋಗೋಣವೆಂದು ಹೋದೆ. ಸಾರದ ಕಿರು ಬಡಿಗೆಯೇ ಒಂದು ಸಂಕದಷ್ಟು ಉದ್ದವಿದೆ. ಆದರಲ್ಲೂ ಎರಡೇ ಬಡಿಗೆ ಉಳಿದಿತ್ತು. ಅದೂ ತೂಗುತ್ತಿತ್ತು. ಹಿಡಿಬಳ್ಳಿ ಕೈಗೆ ಸುಲಭವಾಗಿ ಸಿಗುವಂತಿರಲಿಲ್ಲ. ಕಿರುಬಡಿಗೆಯನ್ನೇ ಅರ್ಧಕ್ಕಿಂತ ಮುಂದೆ ದಾಟಲಾಗದೆ ಹಿಂದೆ ಬಂದೆ.

ಕಿರುಬಡಿಗೆಯ ತಳದಲ್ಲಿ ಮರದ ದೊಡ್ಡ ಹರೆಯಿದೆ. ಆದರ ಮೇಲೆ ಹೋಗಿ ಸಂಕ ಹತ್ತೋಣವೆಂದು ನೋಡಿದೆ. ಕಾಲುಬುಡದಲ್ಲೇ ಸುಳಿ ಸುಳಿಯಾದ ಕೆಂಪು ನೀರು. ಧೈರ್ಯವಾಗಲಿಲ್ಲ. ಅರ್ಧಕ್ಕೇ ಹಿಂದಿರುಗಬೇಕಾಯಿತು.

ಮಲೆನಾಡಿನಲ್ಲೇ ಹುಟ್ಟಿ ಬೆಳೆದು ಇಂಥ ನಾಲ್ಕಾರು ತರದ ಸಂಕ ದಾಟಿ ಅನುಭವವಿರುವ ನನಗೇ ಹೀಗಾದರೆ ಬೇರೆಯವರಿಗೆ ಹೇಗೆ ಎಂದು ಅಶ್ಚರ್ಯಪಡುತ್ತ ಹಿಂದೆ ಬಂದೆ.

ಈ ಹಳ್ಳಕ್ಕೆ ಒಂದು ಕಾಲು ಸೇತುವೆ ಮಂಜೂರಾಗಿದೆಯಂತೆ. ಆದರೆ ಹೋದ ವರ್ಷ ಹಣವಿಲ್ಲದೆ ಸೇತುವೆ ಆಗಲಿಲ್ಲ. ಈಗ ಸೇತುವೆ ಇಲ್ಲಿ ಆಗ ಬೇಕೋ, ಸ್ವಲ್ಪ ಕೆಳಗೆ ಪಾಳ್ಯದ ಮಕ್ಕಿ ದೇವಸ್ಥಾನದ ಬಳಿಯಲ್ಲಿ ಆಗಬೇಕೋ ಎಂಬ ಜಿಜ್ಞಾಸೆಯಲ್ಲಿ ಹೊತ್ತು ಹೋಗುತ್ತಿರುವಂತಿದೆ. ಇದಕ್ಕೆ ಇನ್ನೂ ಎಷ್ಟು ಕಾಲ ಹೋಗಬೇಕೋ ಆ ಇಲಾಖೆಗೇ ಗೊತ್ತು ಎನ್ನುತ್ತಾರೆ ಇಲ್ಲಿನ ಜನ.

ಉತ್ತಮೇಶ್ವರದಲ್ಲಿ ಲಯನ್ಸ್ ಆಶ್ರಯದಲ್ಲಿ 160 ಮಂದಿಗೆ ಉಚಿತ ಚಿಕಿತ್ಸೆ

ಉತ್ತಮೇಶ್ವರ: ಇಲ್ಲಿ ಮಾ. 31 ರಂದು ಸ್ಟೇಟ್ ಬ್ಯಾಂಕ್ ಮತ್ತು ಕೊಪ್ಪದ ಲಯನ್ಸ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಸ್ತ್ರೀರೋಗ ಮತ್ತು ಮಕ್ಕಳ ರೋಗಗಳ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ನಡೆಯಿತು. ಶೃಂಗೇರಿಯ ಧನ್ವಂತರಿ ಆಸ್ಪತ್ರೆಯ ತಜ್ಞರುಳಾದ ಡಾ||ಜನಾರ್ದನ ಅಂಕೋಲೇಕರ್ (ಸ್ತ್ರೀರೋಗ) ಮತ್ತು ಡಾ|| ಸುಬ್ಬಲಕ್ಷ್ಮಿ(ಮಕ್ಕಳ ತಜ್ಞೆ) ಇವರುಗಳು ಭಾಗವಹಿಸಿದ್ದು, ಸುಮಾರು 60 ಮಕ್ಕಳೂ ಸೇರಿದಂತೆ ಒಟ್ಟು 160 ಮಂದಿ ಶಿಬಿರದ ಪ್ರಯೋಜನ ಪಡೆದರು. ಕೊಪ್ಪದ ಬಾಲವಿಕಾಸ ಯೋಜನಾಧಿಕಾರಿ ಟಿ. ಪಿ. ಬೋರಯ್ಯ ಅವರೂ ಭಾಗವಹಿಸಿದ್ದು, ತಾಯಿ-ಮಗುವಿನ ಆರೋಗ್ಯದ ಬಗ್ಗೆ ಅತ್ಯುತ್ತಮವಾದ ಭಿತ್ತಿ ಚಿತ್ರಗಳನ್ನೂ ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರು.

ಉತ್ತಮೇಶ್ವರ ಆಸ್ಪತ್ರೆ ಕಟ್ಟಡ ಉದ್ಘಾಟನೆ

ಉತ್ತಮೇಶ್ವರ: ಇಲ್ಲಿನ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವನ್ನು ಜಿಲ್ಲಾ ಮಂತ್ರಿ ಗೋವಿಂದ ಗೌಡರು ಏ. 9 ರಂದು ಉದ್ಘಾಟಿಸಿದರು. ಎನ್.ವಿ.ಆನಂದರಾಂ ಭಟ್ಟರು ಅಧ್ಯಕ್ಷತೆ ವಹಿಸಿದ್ದು, ಬಿ.ಜಿ. ಚಿದಂಬರ್, ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಲೋ|| ಇಲಾಖೆ ಎಕ್ಸಿಕ್ಯುಟಿವ್ ಇಂಜನಿಯರ್ ರಾಧಾಕೃಷ್ಣ ರೆಡ್ಡಿ ಮುಖ್ಯ ಅತಿಥಿಗಳಾಗಿದ್ದರು.

ಗ್ರಾಮದ ಬೇಡಿಕೆಗಳ ಬಗ್ಗೆ ಮಂತ್ರಿಗಳಿಗೆ ಮನವಿ ಪತ್ರ ಅರ್ಪಿಸಲಾಯಿತು. ಆಸ್ಪತ್ರೆ ಕಟ್ಟಡದ ಇಬ್ಬರು ಸ್ಥಳದಾನಿಗಳು ಮತ್ತು ಕಟ್ಟಡ ಕಂಟ್ರಾಕ್ಟರ್ ಕಾಡಪ್ಪಗೌಡ ಇವರುಗಳನ್ನು ಸನ್ಮಾನಿಸಲಾಯಿತು. ಉತ್ತಮ ಕೆಲಸ ನಿರ್ವಹಿಸಿದ ಆರೋಗ್ಯ ಕಾರ್ಯಕರ್ತ /ಕಾರ್ಯ ಕರ್ತೆಯರಿಗೆ ಡಿ. ಹೆಚ್. ಓ ಬಹುಮಾನ ಹಂಚಿದರು.

ಆಸ್ಪತ್ರೆಯ ವೈದ್ಯಾಧಿಕಾರಿ ಡಾ|| ಕೋದಂಡರಾಂ ಸ್ವಾಗತಿಸಿ, ಹೆಚ್.ವಿ. ಪ್ರಭಾಕರ್ ವಂದಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿ.ವಿ. ಮನೆ ನಾಗರಾಜ್; ಅಚ್ಚು: ವಿವೇಕ ಅಚ್ಚುಕೂಟ, ಕೊಪ್ಪ.